ಅ) ಜಿಲ್ಲಾ ಪಂಚಾಯಿತಿಯ ಸದಸ್ಯರುಗಳ ಜಿಲ್ಲಾ ಪಂಚಾಯಿತಿಯ ಕಾಯ್ದೆಯ ಪ್ರಕಾರ ಗ್ರಾಮ ಪಂಚಾಯಿತಿ ಸಭೆಗಳಿಗೆ ಹಾಜರಾಗುವ ಅವಕಾಶ ಇದೆಯೇ?

ಇ) ಚುನಾಯಿತ ಪ್ರತಿನಿಧಿಗಳಿಗೆ ಈ ಸಭೆಗಳಿಗೆ ಹೋಗಲು ಅವಕಾಶ ಇಲ್ಲದಿದ್ದಲ್ಲಿ ಜಿಲ್ಲಾ ಪಂಚಾಯಿತಿಯಲ್ಲಿ ತಿದ್ದುಪಡಿ ಮಾಡಲು ಸರ್ಕಾರದವರು ಆಲೋಚಿಸಿದ್ದಾರೆಯೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಹೌದು

ಆ) ಇಲ್ಲ

ಇ) ಇಲ್ಲ .

ರಾಜ್ಯದಲ್ಲಿ ಇರತಕ್ಕ ಅಲ್ಪ ಸಂಖ್ಯಾತರಿಗೆ ಶಿಕ್ಷಣದಲ್ಲಿ ಮೀಸಲಾತಿ.

2204 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಂಗಳೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮತೀಯ ಅಲ್ಪಸಂಖ್ಯಾತರ ಶಿಕ್ಷಣಕ್ಕಾಗಿ ಸರ್ಕಾರವು ಮೀಸಲಾತಿ ನೀಡಿದೆಯೇ, ನೀಡಿದ್ದಲ್ಲಿ ಈ ಮೀಸಲಾತಿ ರಾಜ್ಯದಲ್ಲಿ ಯಾವಾಗಿನಿಂದ ಜಾರಿಯಲ್ಲಿದೆ?

ಆ) ರಾಜ್ಯದಲ್ಲಿ ಇಲ್ಲಿಯವರೆಗೆ ಎಷ್ಟು ಅಭ್ಯರ್ಥಿಗಳು ತಾಂತ್ರಿಕ, ವೈದ್ಯಕೀಯ ಮತ್ತು ಇತರೇ ಶಿಕ್ಷಣ ವರ್ಗದಲ್ಲಿ ಮೀಸಲಾತಿಯಿಂದ ಪ್ರವೇಶಾವಕಾಶ ಪಡೆದಿರುತ್ತಾರೆ?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :

ಅ) ಮೀಸಲಾತಿತ ನೀಡಿಲ್ಲ,

ಆ) ಉದ್ಭವಿಸುವುದಿಲ್ಲ.

ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಕರ ತರಬೇತಿಗೆ ಆಯ್ಕೆ ಕುರಿತು

2541- ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಕರ ತರಬೇತಿ ಕೇಂದ್ರಗಳಿಗೆ ಪ್ರವೇಶ ನೀಡಲು ಈ ಸಂಸ್ಥೆಗಳಿಗೆಲ್ಲಾ ಸರ್ಕಾರದವರು ಮಾರ್ಗಸೂಚಿ ಪತ್ರ ನೀಡಿರುವರೇ. ಹಾಗಿದ್ದಲ್ಲಿ ಮಾರ್ಗಸೂಚಿ ಷರತ್ತುಗಳನ್ನು ಉಲ್ಲಂಘಿಸುವ ಸಂಸ್ಥೆಯ ಆಯ್ಕೆ ಪಟ್ಟಿಯನ್ನು ರದ್ದುಗೊಳಿಸಲಾಗುವುದೇ.

ಆ) ಈ ಆಯ್ಕೆ ಸಮಿತಿಯ ಅಧ್ಯಕ್ಷ ಮತ್ತು ಇನ್ನಿತರ ಸದಸ್ಯರಾರು.

ಇ) ಕ್ರಾಂತಿವೀರ ಸಂಗೋಳ್ಳಿ ರಾಯಣ್ಣ ದೈಹಿಕ ಶಿಕ್ಷಣ ತರಬೇತಿ ಮಹಾವಿದ್ಯಾಲಯ ಲಿಂಗಸೂಗೂರು ಇಂದಿಗೂ ಈ ವರ್ಷದ ಪ್ರವೇಶ ಆಯ್ಕೆ ಪಟ್ಟಿಯನ್ನು ಸುಚನಾ ಫಲಕದಲ್ಲಿ ಪ್ರಕಟಿಸದೇ ಇರುವುದು ಮತ್ತು ಆಯ್ಕೆಯಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ಸರ್ಕಾರಕ್ಕೆ ದೂರು ಬಂದಿದೆಯೇ. ಹಾಗಿದ್ದಲ್ಲಿ ಸರ್ಕಾರದವರು ಕೈಗೊಳ್ಳಲಾಗುವ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಹೌದು

ಆ)

1)	ಜಿಲ್ಲಾ ಉಪನಿರ್ದೇಶಕರು	ಅಧ್ಯಕ್ಷರು
2)	ಆಯಾ ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕರು	ಸದಸ್ಯ ಕಾರ್ಯದರ್ಶಿ
3)	ಸಂಬಂಧಿಸಿದ ದೈಹಿಕ ಶಿಕ್ಷಣ ಕಾಲೇಜಿನ ಪ್ರಾಚಾರ್ಯರು	ಸದಸ್ಯ ಕಾರ್ಯದರ್ಶಿ
4)	ಜೇಷ್ಠತೆಯಲ್ಲಿ ಹಿರಿಯರಾದ ಒಬ್ಬ ಪದವೀಧರ ದೈಹಿಕ ಶಿಕ್ಷಣ ಶಿಕ್ಷಕರು	ಸದಸ್ಯರು

ಇ) ಬಂದಿದೆ. ಈ ಬಗ್ಗೆ ಸಹ ನಿರ್ದೇಶಕರು ಗುಲ್ಬರ್ಗ ಇವರಿಗೆ ವಿಚಾರಣೆ ನಡೆಸಿ ವರದಿ ನೀಡುವಂತೆ ತಿಳಿಸಲಾಗಿದೆ. ವರದಿಯನ್ನು ಪಡೆದು ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಮತ್ತು ಕಿರಿಯ ಮಹಾವಿದ್ಯಾಲಯಗಳಲ್ಲಿ ಖಾಲಿ ಇರುವ ಬೋಧಕ ಬೋಧಕೇತರ ಹುದ್ದೆಗಳು.

2657 - ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಪ್ರೌಢ ಶಾಲೆಗಳ ಮತ್ತು ಕಿರಿಯ ಮಹಾವಿದ್ಯಾಲಯಗಳ ಸಂಖ್ಯೆ ಎಷ್ಟು. ಇವುಗಳಲ್ಲಿ ಇಂದಿಗೂ ಖಾಲಿಯಾಗಿರುವ ಬೋಧಕ, ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು. (ಜಿಲ್ಲಾವಾರು ಮಾಹಿತಿ ನೀಡಿ)

ಆ) ರಾಯಚೂರು ಜಿಲ್ಲೆಯಲ್ಲಿರುವ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಮತ್ತು ಕಿರಿಯ ಮಹಾವಿದ್ಯಾಲಯಗಳಲ್ಲಿ ಯಾವ ಯಾವ ವರ್ಷಗಳಿಂದ ಶಿಕ್ಷಕರ ಮತ್ತು ಉಪನ್ಯಾಸಕರ (ವಿಷಯವಾರು) ಕೊರತೆ ಇದೆ. ಈ ಕೊರತೆಯನ್ನು ತುಂಬಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು.

ಇ) ಪ್ರೌಢ ಶಾಲೆಯ ಒಂದು ಕೊಠಡಿ ಮತ್ತು ಕಿರಿಯ ಮಹಾವಿದ್ಯಾಲಯದ ಪ್ರವಚನ ಸಭಾಂಗಣ ಉದ್ದ-ಅಗಲ ಎಷ್ಟು ಇರಬೇಕೆಂದು ಮತ್ತು ಕನಿಷ್ಠ ಗರಿಷ್ಠ ಎಷ್ಟು ವಿದ್ಯಾರ್ಥಿಗಳು ಕುಳಿತು ಕೊಳ್ಳುವ ಸ್ಥಳಾವಕಾಶ ಇರಬೇಕೆಂದು ನಿಗದಿ ಮಾಡಿದೆಯೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ)

		ಖಾಲಿ ಹುದ್ದೆಗಳು	
		ಬೋಧಕ	ಬೋಧಕೇತರ
ಸರ್ಕಾರಿ ಪ್ರೌಢ ಶಾಲೆಗಳು	2147	4085	1564
ಸರ್ಕಾರಿ ಕಿರಿಯ ಕಾಲೇಜುಗಳು	668		

ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ.